ಶ್ರೀ ಜೆ. ಎಸ್. ದೇಶಮುಖ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು).— ಮಾನ್ಯ ಅಧ್ಯಕ್ಷರೇ, ಈಗಾಗಲೇ ಡಾ. ತಿಮ್ಮೇಗೌಡರು ಇದಕ್ಕೆ ಸಂಬಂಧಪಟ್ಟಂತೆ ಇನ್‌ಫರ್ಮೇಷನ್ ಯಾವಾಗ ಸಿಕ್ಕಿತು ಎಂದು ಕೇಳಿದ್ದಾರೆ. ೩೧.೧೯೯೯ರಲ್ಲಿ ಸಿಕ್ಕಿತು. ಎಲ್ಲಾ ಶಾಪ್ಸ್‌ಗಳಿಗೆ ೧.೨.೨೦೦೦ರಂದು ಒಂದು ಸರ್ಕ್ಯೂಲರ್ ಇಶ್ಯೂ ಮಾಡಿ ಈ ಡ್ರಗ್ಸ್ ಸೀಜ್ ಮಾಡಬೇಕೆಂದು, ಸ್ಟಾಕ್‌ಗಳನ್ನು ಇಡಬಾರದು ಎಂದು ತಿಳಿಸಿದ್ದೇವೆ. ಆವರು ಸೇಲ್ ಮಾಡಲಿಲ್ಲ. ಬೆಂಗಳೂರಿನಲ್ಲಿ ೧೯೦೦ ಜನ ಪ್ರೊಫೆಷನಲ್ ಬ್ಲಡ್ ಡೊನೇಟರ್ಸ್ ಇದ್ದಾರೆ ಅವರನ್ನು ಐಡೆಂಟಿಫೈಡ್ ಮಾಡಿ ಬ್ಲಡ್ ಸ್ಯಾಂಪಲ್ ತೆಗೆದುಕೊಂಡಿದ್ದೇವೆ. ಯಾರು ಬ್ಲಡ್ ಡೊನೇಟ್ ಮಾಡುತ್ತಾರೆ, ಅವರಿಗೆ ಟೋಕನ್ ಮಾಡಿ ಕಾರ್ಡ್ ಕೊಟ್ಟು ಅವರನ್ನು ಐಡೆಂಟಿಫೈ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈಗಾಗಲೇ ಟೆಲಿವಿಷನ್ ಮುಖಾಂತರವಾಗಲೀ, ರೇಡಿಯೋ ಮುಖಾಂತರವಾಗಲೀ ಅಥವಾ ಪೇಪರ್ ಮುಖಾಂತರವಾಗಲೀ ಪಬ್ಲಿಷ್ ಮಾಡಿ ತಲಾಶ್ ಮಾಡುತ್ತೇವೆ. ಆದರೂ ಸಹ ಸರ್ಕಾರಕ್ಕೆ ಇದರ ಬಗ್ಗೆ ಕಾಳಜಿ ಇಲ್ಲ, ಎಂದು ಹೇಳಿದ್ದಾರೆ. ಸರ್ಕಾರ ಕಾಳಜಿ ತೆಗೆದುಕೊಂಡಿದೆ. ಈಗ ಡಾ. ತಿಮ್ಮೇಗೌಡರು ಏನು ಸಲಹೆ ಮಾಡಿದಾರೆ, ಅದರ ವಿಷಯವಾಗಿ ನಮ್ಮ ಅಧಿಕಾರಿಗಳು ಬಂದಿದ್ದಾರೆ ಅವರ ಸಲಹೆಯನ್ನು ಕುರಿತು ಇನ್ನೊಮ್ಮೆ ಮಾತನಾಡುತ್ತೇನೆ. ದೇಶದ ಆಗುಹೋಗುಗಳ ದೃಷ್ಟಿಯಿಂದ ತಾವು ಏನು ಒಂದು ಸಲಹೆಯನ್ನು ಸರ್ಕಾರಕ್ಕೆ ಮಾಡಿದ್ದಾರೆ, ಅಂದರೆ ಈ ಕಾರಣ ಏಡ್ಸ್‌ನಿಂದ ಬಳಲುವವರನ್ನು ಬೇರೆ ಕಡೆ ಇಡಲು ಸಾಧ್ಯವಾಗಿಲ್ಲ ಎಂದು ಹೇಳಿದ್ದಾರೆ. ಗೋವಾದಲ್ಲಿ ಇವರ ಬಗ್ಗೆ ಒಂದು ಕಾಯಿದೆಯನ್ನು ತಂದರು ನಮ್ಮಲ್ಲಿ ಕಾಯಿದೆ ಇರಲಾರದ ಕಾರಣ ನಾವು ಬೇರೆ ಕಡೆ ಇಡಬೇಕಾಗುತ್ತದೆ. ಆದಷ್ಟು ಬೇಗ ನಾವು ಕಾಯಿದೆಯನ್ನು ಜಾರಿಗೆ ತರುತ್ತೇವೆ. ಡಾಕ್ಟರ್‌ರವರು ಏನು ಸಲಹೆ ಕೊಟ್ಟಿದ್ದಾರೆ ಆ ಸಲಹೆಯನ್ನು ಗಣನೆಗೆ ತೆಗೆದುಕೊಂಡು, ಆ ಸಲಹೆ ಬಗ್ಗೆ ಗಮನ ಕೊಡಲಾಗುತ್ತದೆ.

ಶ್ರೀ ಬಿ. ಎ. ಜೀವಿಜಯ.— ಕೇಂದ್ರ ಸರ್ಕಾರದವರ ಹತ್ತಿರ ಸಿಗುವವರೆಗೆ ಇವರು ಏನು ರೆಮಿಡಿಯಲ್ ಮೆಷರ್ಸ್ ತೆಗೆದುಕೊಳ್ಳುತ್ತಾರೆ, ಇದಕ್ಕೆ ಉತ್ತರ ಕೊಡಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.— ಓರ್ ನಿಯಮದ ಪ್ರಕಾರ ನೋಟೀಸ್ ಕೊಡಿ. ತಿದು ಬಹಳ ಮಹತ್ವದ ವಿಷಯ. ಓರ್ ನಿಯಮದ ಪ್ರಕಾರ ನಾಳೆ ಅಥವಾ ನಾಡಿದ್ದು ಚರ್ಚೆಗೆ ಇಡೋಣ. ಈಗ ನಿಯಮ ೩೫ರ ಮೇರೆಗೆ ಚರ್ಚೆ.

ನಿಯಮ ೩೫ರ ಮೇರೆಗೆ

೧) ಉಡುಪಿಯಲ್ಲಿ ಆಟೋರಿಕ್ಷಾ ಚಾಲಕರಿಗೆ ಹೊಸ ಮೀಟರುಗಳನ್ನು ಅಳವಡಿಸಲು ಕಾಲಾವಧಿಯ ವಿಸ್ತರಣೆ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).— ಮಾನ್ಯ ಅಧ್ಯಕ್ಷರೆ, ಉಡುಪಿಯಲ್ಲಿ ರಿಕ್ಷಾ ಚಾಲಕರಿಗೆ ಹೊಸ ಮೀಟರ್‌ನ್ನು ಅಳವಡಿಸುವಂತೆ ಆದೇಶಿಸಲಾಗಿದ್ದು ಅದಕ್ಕೆ ಸಾಕಷ್ಟು ಸಮಯವನ್ನೂ ನೀಡಿರುವುದಿಲ್ಲ. ಅಲ್ಲದೆ, ಮೀಟರ್ ಮೇರೆಗೆ ನಡೆಸಿದರೆ ಉಡುಪಿಯಂತಹ ಸ್ಥಳದಲ್ಲಿ ಹಾಗೂ ತಾಲ್ಲೂಕಿನ ಇತರೆಡೆಗಳಲ್ಲಿ ಬ್ಯಾಂಕಿಗೆ ಬಡ್ಡಿ, ಪೆಟ್ರೋಲ್, ಆಯಿಲ್, ಇತ್ಯಾದಿಗಳಿಗೆ ಕೊಟ್ಟು ಉಳಿಯುವ ಹಣ ದಿನವೊಂದಕ್ಕೆ ಐವತ್ತು ಪೈಸೆಗಳಿಂದು ಲೆಕ್ಕಹಾಕಿದ್ದಾರೆ. ಅಲ್ಲದೆ ಕನಿಷ್ಠ ೩ ರೂಪಾಯಿಗಳನ್ನೂ, ೬ ರೂಪಾಯಿಗಳ ವೇಟಿಂಗ್ ಚಾರ್ಜ್ ಹಾಗೂ ಕಿಲೋಮೀಟರಿಗೆ ೨ ರೂಪಾಯಿಗಳಂತೆ ವಿಧಿಸಲು ಅನುಮತಿ ನೀಡಬೇಕೆಂದು ಉಡುಪಿ ರಿಕ್ಷಾ ಚಾಲಕರು ಹಾಗೂ ಮಾಲೀಕರ ಸಂಘದವರು ಮನವಿ ಮಾಡಿಕೊಂಡಿದ್ದಾರೆ. ಇವರ ಮನವಿ ನ್ಯಾಯವಾಗಿದ್ದು ಸದರಿ ಮನವಿಯ ಬಗ್ಗೆ ಸರಕಾರದವರು ಪರ್ಯಾಲೋಚಿಸಿ ಅದರಂತೆ ಆದೇಶ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಸಾರಿಗೆ ಸಚಿವರು).— ಉಡುಪಿಯೂ ಸೇರಿದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಆಟೋರಿಕ್ಷಾದವರಿಗೆ ಫ್ಲಾಗ್ ಮೀಟರುಗಳನ್ನು ಅಳವಡಿಸಲು ಇನ್ನಷ್ಟು ಕಾಲಾವಕಾಶವನ್ನು ನೀಡುವಂತೆ ಸೂಚನೆ ನೀಡಲಾಗುತ್ತಿದೆ. ಪ್ರಯಾಣಿಕರ ಹಾಗೂ ಆಟೋರಿಕ್ಷಾ ಚಾಲಕರ, ಮಾಲೀಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆಟೋರಿಕ್ಷಾ ಪ್ರಯಾಣ ದರಗಳನ್ನು ಪರಿಷ್ಕರಿಸಿ ೧.೪.೧೯೯೯ರಿಂದ ಜಾರಿಗೆ ತರಲು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

೨) ದಕ್ಷಿಣ ಕನ್ನಡ ಜಿಲ್ಲೆಯ ಆಟೋರಿಕ್ಷಾದವರಿಗೆ ಮಿಾಟರ್ ಜೋಡಿಸಲು ಆದೇಶ ನೀಡಿರುವುದು.

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಆಟೋರಿಕ್ಷಾದವರು ಮಿಾಟರ್ ಜೋಡಣೆ ಮಾಡಬೇಕೆಂದೂ, ಇದೇ ಮಾರ್ಚ್ ತಿಂರ ಒಳಗೆ ಆ ಕೆಲಸ ಪೂರ್ತಿಯಾಗಬೇಕೆಂದೂ, ದಕ್ಷಿಣ ಕನ್ನಡದ ಡೆಪ್ಯುಟಿ ಕಮಿಷನರು ಆದೇಶ ಹೊರಡಿಸಿದ್ದಾರೆ. ಈ ಕುರಿತು ಕಳೆದ ವಿಧಾನ ಮಂಡಲದ ಸಭೆಯಲ್ಲಿ ನಾನು ಪ್ರಶ್ನೆ ಕೇಳಿ, ದಕ್ಷಿಣ ಕನ್ನಡದ ನೈಸರ್ಗಿಕ ತೊಂದರೆಗಳಿಂದ ರಿಕ್ಷಾದವರು ತುಂಬಾ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಏರು, ತಗ್ಗು ಪ್ರದೇಶವಾದುದರಿಂದ ಕಷ್ಟವಿದೆ. ಆದ್ದರಿಂದ ಕೊಡಗು ಜಿಲ್ಲೆಗೆ ಮಿಾಟರ್ ಜೋಡಣೆ ಮನ್ನಾ ಮಾಡಿದಂತೆ ದಕ್ಷಿಣ ಕನ್ನಡಕ್ಕೂ ಮಿಾಟರ್ ಜೋಡಣೆ ಮನ್ನಾ ಮಾಡಬೇಕೆಂದು ಕೇಳಿಕೊಂಡಿದ್ದೆ. ಆಗ ಸಚಿವರು ದಕ್ಷಿಣ ಕನ್ನಡದ ಮಟ್ಟಿಗೆ ಪುನರ್‌ಪರಿಶೀಲನೆ ಮಾಡುವುದಾಗಿ ಆಶ್ವಾಸನೆ ಕೊಟ್ಟಿರುತ್ತಾರೆ. ಹಾಗಿರಲು ಈ ಕುರಿತು ಸಾರಿಗೆ ಸಚಿವರು ದಕ್ಷಿಣ ಕನ್ನಡದ ಡಿ.ಸಿ.ಯವರಿಗೆ ಆದೇಶ ಕಳುಹಿಸಿರುವರೇ ? ಆಶ್ವಾಸನೆ ಕೊಟ್ಟಂತೆ ಪುನರ್‌ಪರಿಶೀಲನೆ ಮಾಡ ಲಾಗಿದೆಯೆ ? ಈ ಕುರಿತು ಸಾರಿಗೆ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿದ್ಧರಾಮಯ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ.....

ಪ್ರಯಾಣಿಕರ ಹಿತದೃಷ್ಟಿಯಿಂದ ಫ್ಲಾಗ್ ಮಿಾಟರ್‌ಗಳನ್ನು ಸಿಂ–ಸಿ–ರ್ಲ್ಯರ ಒಳಗೆ ಜೋಡಿಸ ಬೇಕೆಂದು ದಕ್ಷಿಣ ಕನ್ನಡ ಜಿಲ್ಲಾ ಆಟೋರಿಕ್ಷಾದವರಿಗೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದವರು ಆದೇಶ ನೀಡಿರುವುದು ನಿಜ. ಕಳೆದ ಬಾರಿ ಅಧಿವೇಶನದಲ್ಲಿ ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ದಕ್ಷಿಣ ಕನ್ನಡ ಜಿಲ್ಲೆಯು ಏರುತಗ್ಗು ಪ್ರದೇಶಗಳಿಂದ ಕೂಡಿರುವುದರಿಂದ ಕಡ್ಡಾಯವಾಗಿ ಫ್ಲಾಗ್ ಮಿಾಟರ್‌ಗಳನ್ನು ಅಳವಡಿಸಬೇಕೆಂದು ಮಾಡಿದರೆ, ಆದರಿಂದ ಆಟೋ ಓಡಿಸುವವರಿಗೆ ತುಂಬ ಕಷ್ಟನಷ್ಟಗಳಾಗುವುದೆಂದು ಈ ಬಗ್ಗೆ ಪುನರ್ ಪರಿಶೀಲನೆ ಮಾಡುತ್ತೀರಾ? ಎಂದು ಕೇಳಿದ್ದು ಸರಿ. ಆಗ ಸಾರ್ವಜನಿಕರ ಮತ್ತು ಆಟೋರಿಕ್ಷಾ ನಡೆಸುವವರ ಇಬ್ಬರ ಹಿತದೃಷ್ಟಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಪ್ರಯಾಣಿಕರ ಮತ್ತು ರಿಕ್ಷಾ ನಡೆಸುವವರ ಸಭೆಯನ್ನು ಕರೆದಿದ್ದು, ಮಾನ್ಯ ಸದಸ್ಯರು ಹೇಳಿದ ವಿಚಾರಗಳ ಬಗ್ಗೆ ಗಮನ ಕೊಡುತ್ತೇನೆ ಎಂದು ಹೇಳಿದ್ದು ಸರಿ. ರಿಕ್ಷಾ ಚಾಲಕರುಗಳು ಫ್ಲಾಗ್ ಮಿಾಟರುಗಳಿಗೆ ಹೆಚ್ಚಿಗೆ ಹಣ ಬೇಕಾಗುವುದರಿಂದ ಇದನ್ನು ಬೇಡವೆಂದು ಮನವಿ ಮಾಡಿರುತ್ತಾರೆ. ಪ್ರಯಾಣಿಕರ ಹಿತದೃಷ್ಟಿಯಿಂದ ಈ ಮಿಾಟರ್‌ಗಳ ಅವಶ್ಯಕತೆ ಯಿದೆ. ಆಟೋರಿಕ್ಷಾ ಚಾಲಕರು ಫ್ಲಾಗ್ ಮಿಾಟರ್ ಪರಿವರ್ತನೆ ಮಾಡಲು ಇನ್ನಷ್ಟು ಕಾಲಾವಕಾಶ ಕೇಳಿರುವುದರಿಂದ ಫ್ಲಾಗ್ ಮಿಾಟರ್‌ಗಳನ್ನು ಅಳವಡಿಸಲು ಇನ್ನಷ್ಟು ಕಾಲಾವಕಾಶ ನೀಡಲು ಹಾಗೂ ಬ್ಯಾಂಕ್‌ಗಳ ಮುಚ್ಚಾಂತರ ಇದಕ್ಕೆ ಸಾಲ ದೊರಕಿಸಿಕೊಡುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರಿಗೆ ಶೀಘ್ರವಾಗಿ ಸೂಚನೆ ನೀಡಲಾಗುವುದು.

(೩) ಬೆಳಗಾವಿ ಜಿಲ್ಲೆಯಲ್ಲಿ ಕೂಲಿಗಾರರ ಮಹಿಳೆಯರಿಗೆ ಹೆರಿಗೆ ಭತ್ಯ ನೀಡುವಲ್ಲಿ ವಿಳಂಬ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.— ಸನ್ಮಾನ್ಯ ಅಧ್ಯಕ್ಷರೆ, ಬೆಳಗಾವಿ ಜಿಲ್ಲೆಯಲ್ಲಿ ಕೂಲಿಕಾರ ಮಹಿಳೆಯರಿಗಾಗಿ ನೀಡುತ್ತಿರುವ ಹೆರಿಗೆ ಭತ್ಯೆ ವಿತರಣೆಯಾಗುವುದರಲ್ಲಿ ಹಣಕಾಸಿನ ತೊಂದರೆ ಇದ್ದು ಸರ್ಕಾರದಿಂದ ಹಣ ಬಿಡುಗಡೆಯಾಗಿಲ್ಲವೆಂದು ಜಿಲ್ಲಾ ಪರಿಷತ್ ಸಂಬಂಧಿತ ಜನರಿಗೆ ಹೇಳುತ್ತಾರೆನ್ನುವ ವಿಷಯವು ಚರ್ಚೆಯಲ್ಲಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ ಹೆರಿಗೆ ಭತ್ಯೆ ಕೊಡುವ ವಿಷಯದಲ್ಲಿ ಲಕ್ಷಾಂತರ ರೂಪಾಯಿ ಹಣವು ಬರಬೇಕಾಗಿದ್ದು, ಸಂಬಂಧಿತ ವೈದ್ಯಾಧಿಕಾರಿಗಳು ಕಣ ಇಲ್ಲದಿರುವುದರಿಂದ ಎಷ್ಟು ತಿಂಗಳಿಂದ ಹೆರಿಗೆ ಭತ್ಯೆ ಹಣವನ್ನು, ವಿತರಣೆ ಮಾಡಿಲ್ಲ ಹಾಗೂ ಇದಕ್ಕೆ ಜವಾಬ್ದಾರರು ಯಾರು? ಹೆರಿಗೆ ಭತ್ಯೆ ಕೊಡುವಾಗ ಅಪಲಂಬಿಸುತ್ತಿರುವ ಪದ್ಧತಿಯನ್ನು ಸರಳಗೊಳಿಸಿ ಫಲಾನುಭವಿಗಳಿಗೆ ಆಗುತ್ತಿರುವ ಈ ತೊಂದರೆಯನ್ನು ಹೋಗಲಾಡಿಸಲು ಜಿಲ್ಲಾಪರಿಷತ್ ತನ್ನ ಜವಾಬ್ದಾರಿ ಅರಿತಿಲ್ಲವೆಂದು ಸರಕಾರದ ಗಮನಕ್ಕೆ ತರುತ್ತಿದ್ದು ಬೆಳಗಾವಿ ಜಿಲ್ಲೆಗೆ ಕೊಡಬೇಕಾಗಿರುವ ಹೆರಿಗೆ ಭತ್ಯೆಯ ಹಣವನ್ನು ಕೂಡಲೆ ಬಿಡುಗಡೆ ಮಾಡಬೇಕಾಗಿ ಸರ್ಕಾರದ ಗಮನವನ್ನು ಸೆಳೆದಿದ್ದು, ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಈ ಬಗ್ಗೆ ಸದನದಲ್ಲಿ ಹೇಳಿಕೆ ನೀಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಪಿ.ಜಿ ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ಕೊಡಿಸುತ್ತೇನೆ. ಮತ್ತೆ ಅದಕ್ಕೆ ಸೂಕ್ತ ಕ್ರಮವನ್ನೂ ಸಹಿತ ತಕ್ಷಣ ತೆಗೆದುಕೊಳ್ಳುತ್ತೇವೆ.